॥ ಶ್ರೀ ಸೋಮನಾಥೇಶ್ವರ ಪ್ರಸನ್ನಃ ॥

॥ ಶ್ರೀ ಬ್ರಹ್ಮಲಿಂಗೇಶ್ವರ ಪ್ರಸನ್ನಃ ॥

# ವಿಜ್ಞಾಪನಾ ಪತ್ರ

ಕೆಂಜಾರು ಗ್ರಾಮದ ಅಡ್ಕ ಅಡಪರ ಮನೆಯವರ ಕುಮ್ಕಿ ಜಾಗದಲ್ಲಿ ಅನಾದಿ ಕಾಲದಿಂದಲೂ ಪತ್ತನಾಜೆ ಮೇ 24ಕ್ಕೆ ಕೆಂಜಾರು ಗ್ರಾಮಸ್ಥರೆಲ್ಲ ಸೇರಿ ಒಂದು ತೆಂಗಿನಕಾಯಿ ಹೊಡಿಯುವ ಕ್ರಮ ಇತ್ತು. ಕಾರಣಾಂತರದಿಂದ ಆ ಜಾಗ ಜರಿದು ಬಿದ್ದ ಕಾರಣ ಕೆಂಜಾರು ಗ್ರಾಮಸ್ಥರೆಲ್ಲರಿಗೂ ದೋಷ ಕಂಡು ಬಂತು. ನಂತರ ಶ್ರೀ ಗಿರೀಶ್ ಪೊದುವಾಳ್‌ರವರ ನೇತೃತ್ವದಲ್ಲಿ ಅಷ್ಟಮಂಗಲ ಪ್ರಶ್ನೆ ಇಟ್ಟಾಗ ಆ ಜಾಗದಲ್ಲಿ ಬ್ರಹ್ಮಲಿಂಗೇಶ್ವರ, ಸುಬ್ರಹ್ಮಣ್ಯ, ಗಣಪತಿ, ರಕ್ತೇಶ್ವರೀ, ನಂದಿಕೋಣ, ನಾಗದೇವರು, ಕ್ಷೇತ್ರಪಾಲನಾಗಿ ಧೂಮಾವತಿ ಬಂಟ ದೇವಸ್ಥಾನಗಳು ಇದ್ದು, ಅದು ಸುಮಾರು 1500 ಇತಿಹಾಸವುಳ್ಳ ದೇವಸ್ಥಾನ ಆಗಿದೆ ಎಂಬ ವಿಷಯ ಕಂಡು ಬಂತು ಅಲ್ಲದೆ ಈ ದೇವಸ್ಥಾನಗಳನ್ನು ಪುನರ್ ನಿರ್ಮಾಣ ಮಾಡಬೇಕೆಂಬ ವಿಷಯ ತಿಳಿಸಿರುತ್ತಾರೆ. ಆ ಜಾಗ ಕಲ್ಲು ಬಂಡೆಗಳಿಂದ ಕೂಡಿದ್ದು, ಅದನ್ನು ಸಮತಟ್ಟು ಮಾಡಿ ಗ್ರಾಮಸ್ಥರೆಲ್ಲ ಸೇರಿ ಒಂದು ಬಾಲಾಲಯ ನಿರ್ಮಿಸಿ ದೇವರನ್ನು ಮೇಲೆ ಇಡಲು ದಿನ ನಿಶ್ಚಯಿಸಿರುತ್ತೇವೆ. ನಂತರ ದೇವಸ್ಥಾನದ ಪುನರ್‌ನಿರ್ಮಾಣದ ಕೆಲಸಕ್ಕೆ ಕೈ ಹಾಕಬೇಕೆಂದು ತಿಳಿಸಿರುತ್ತಾರೆ. ಇದು ಒಬ್ಬರಿಂದ ಆಗುವಂತಹ ಕೆಲಸವಲ್ಲ ಊರಿನ ಗ್ರಾಮಸ್ಥರೆಲ್ಲ ಸೇರಿ ಮಾಡುವಂತಹ ಕೆಲಸ.

ಆದುದರಿಂದ ಭಗವದ್ಭಕ್ತರಾದ ತಾವೆಲ್ಲರೂ ಈ ನೂತನ ದೇವಾಲಯದ ನಿರ್ಮಾಣಕ್ಕೆ ಹೆಚ್ಚಿನ ರೀತಿಯಲ್ಲಿ ತನು-ಮನ-ಧನಗಳಿಂದ ಸಹಕಾರವನ್ನು ನೀಡಿ, ಈ ಪುಣ್ಯ ಕಾರ್ಯದಲ್ಲಿ ಭಾಗಿಗಳಾಗಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕೆಂದು ಅಪೇಕ್ಷಿಸುವ,



ಕೆಂಜಾರು ಗ್ರಾಮಸ್ಥರು